**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ ಚನ್ನಪಟ್ಟಣ.**

**ಸಿ.ಸಿ. ಸಂಖ್ಯೆ: 656/2022**

ಚಾಸಾ: 2 ಪ್ರಾಸಾ:2

| | | |
|---|---|---|
| ಹೆಸರು | : | ಜವರೇಗೌಡ |
| ಗಂಡನ/ತಂದೆಯ ಹೆಸರು | : | ಶಿವಲಿಂಗೇಗೌಡ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಮಾಕಳಿ ಗ್ರಾಮ |

**ದಿನಾಂಕ 22.11.2025 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ: ಮಾನ್ಯ ಎಪಿಪಿ ಯವರಿಂದ:**

ನನಗೆ ಮೃತ ಹೊನ್ನಯ್ಯರವರ ಪರಿಚಯವಿದೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು. ದಿ:28.04.2022 ರಂದು ಸುಮಾರು ಬೆಳಗಿನ ಜಾವ 5.45 ಗೆ ಗಂಟೆಯ ಸಮಯದಲ್ಲಿ ನಾನು ಮತ್ತು ಚಾಸಾ-3 ಮತ್ತು 4 ರವರು ಹಾಲಿನ ಡೈರಿಯ ಹತ್ತಿರ ಹಾಲನ್ನು ಹಾಕಿ ಹಿಂತಿರುಗಿ ಸುಮಾರು 300 ಮೀಟರ್ ಹಾಲಿನ ಡೈರಿಯಿಂದ ದೂರದಲ್ಲಿ ನಿಂತುಕೊಂಡು ಮಾತನಾಡುತ್ತಿದ್ದಾಗ ಬ್ಯಾಡರಹಳ್ಳಿ ಕಡೆಯಿಂದ ಹಲಸಿನಹಣ್ಣನ್ನು ತುಂಬಿಕೊಂಡು ಪ್ಯಾಷನ್ ಪ್ರೋ ಬೈಕ್ ನಲ್ಲಿ ಮೃತ ಹೊನ್ನಯ್ಯರವರು ಬರುತ್ತಿದ್ದು ನಾನು ಅದನ್ನು ನೋಡಿದ್ದು, ಅವರು ಮುಂದೆಗೆ ಹೋಗಿ ದಿಡೀರ್ ಎಂದು ಬೈಕ್ ಬಿದ್ದ ಶಬ್ದ ನಮಗೆ ಕೇಳಿಸಿತು. ತಕ್ಷಣ ನಾನು ಚಾಸಾ3 ಮತ್ತು 4 ರವರು ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ ಹೊನ್ನಯ್ಯರವರಿಗೆ ಪೆಟ್ಟು ಬಿದ್ದು ರಕ್ತಗಾಯವಾಗಿದ್ದು, ಅವರು ಪ್ರಜ್ಞೆ ತಪ್ಪಿದ್ದರು. ಅದೇ ಸ್ಥಳದಲ್ಲಿ ಕೆಎ-42-ಆರ್-8254 ಹಿರೋ ಹೋಂಡಾ ಸ್ಲೆಂಡರ್ ಮೋಟಾರ್ ಸೈಕಲ್ ಎದುರುಗಡೆಯಿಂದ ಬಂದು ಹೊನ್ನಯ್ಯರವರ ಹಿರೋ ಪ್ಯಾಷನ್ ಪ್ರೋ ಬೈಕ್ ಗೆ ಅಪಘಾತ ಉಂಟು ಮಾಡಿರುವುದು ನಮಗೆ ಕಂಡು ಬಂದಿರುತ್ತದೆ. ಸದರಿ ಹಿರೋ ಹೋಂಡಾ ಸ್ಲೆಂಡರ್ ಬೈಕ್ ನಾಗರಾಜು ಎಂಬುವವರಿಗೆ ಸೇರಿದ್ದು ಎಂದು ಗೊತ್ತಿದ್ದು, ಸದರಿ ನಾಗರಾಜುರವರು ಅದೇ

ಬೈಕ್ ನಲ್ಲಿ ನಾವು ಹಾಲು ಹಾಕಲು ಹೋಗುವ ಸ್ಥಳದಲ್ಲಿ ಅವರೂ ಸಹ ಡೈರಿಗೆ ಬಂದು ಹಾಲು ಹಾಕುತ್ತಾರೆ. ತದನಂತರ ನಾವು ಚಾಸಾ1 ರವರಿಗೆ ಸದರಿ ಅಪಘಾತಯ ವಿಷಯವನ್ನು ತಿಳಿಸಿ ಹೊನ್ನಯ್ಯರವರನ್ನು ಚಿಕಿತ್ಸೆಗಾಗಿ ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಸದರಿ ಅಪಘಾತವನ್ನು ಮಾಡಿರುತ್ತಾರೆಂದು ನೋಡಿ ಗುರುತಿಸಿರುತ್ತಾರೆ. ನಾನು ಆರೋಪಿಯ ಕೆಎ-42-ಆರ್-8254 ಹಿರೋ ಹೋಂಡಾ ಸ್ಲೆಂಡರ್ ಮೋಟಾರ್ ಸೈಕಲ್ ಅನ್ನು ನೋಡಿದರೆ ಗುರುತಿಸುತ್ತೇನೆ ಮತ್ತು ಹಿರೋ ಫ್ಯಾಷನ್ ಪ್ರೋ ಬೈಕ್ ಮೋಟಾರ್ ಸೈಕಲ್ ಅನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಅಪಘಾತವು ವಾಹನ ಸವಾರ ಜೋರಾಗಿ ಚಾಲನೆ ಮಾಡಿದ್ದರಿಂದ ಊರಿನವರು ನನಗೆ ತಿಳಿಸಿರುತ್ತಾರೆ. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ. ಸದರಿ ಅಪಘಾತವು ಆರೋಪಿಯ ತಪ್ಪಿನಿಂದ ಆಗಿರುತ್ತದೆ. ಘಟನೆ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ವಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ, ಅನುಮತಿಸಲಾಯಿತು).**

**<u>ವಾಟೀ ಸವಾಲುಃ ಎಪಿಪಿಯವರಿಂದಃ</u>**

ಹೊನ್ನಯ್ಯರವರು ಕೋಟೆ ಹೊಲದ ಕಡೆಯಿಂದ ಮಾಕಳಿ ಕಡೆಗೆ ಬರುತ್ತಿದ್ದ ಆರೋಪಿಯ ಮೋಟಾರ್ ಸೈಕಲ್ ಎದುರುಗಡೆಯಿಂದ ಅತೀ ವೇಗ ಮತ್ತು ಅಜಾಗರುಕತೆಯಿಂದ ಚಾಲನೆ ಮಾಡಿಕೊಂಡು ಬಂದು ಹಲಸಿನಕಾಯಿ ತುಂಬಿಕೊಂಡು ಬರುತ್ತಿದ್ದ ಹೊನ್ನಯ್ಯರವರ ಮೋಟಾರ್ ಸೈಕಲ್ ಗೆ ಡಿಕ್ಕಿ ಪಡಿಸಿದ್ದು ಅದನ್ನು ನಾನು ಪ್ರತ್ಯಕ್ಷವಾಗಿ ನೋಡಿರುತ್ತೇನೆಂದರೆ ಸರಿಯಲ್ಲ. ಘಟನೆಯಾದ ನಂತರ ಅಪಘಾತವಾದ ಶಬ್ದ ಕೇಳಿಕೊಂಡು ನಾನು ಅಪಘಾತವಾದ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಘಟನೆಯನ್ನು ಕಣ್ಣಾರೆ ನೋಡಿದ್ದರೂ ಸಹ ಆರೋಪಿ ನಮ್ಮ ಊರಿನ ಪಕ್ಕದವರಾಗಿದ್ದ ಕಾರಣ ಮತ್ತು ಅವರು ಪರಿಚಯವಿದ್ದ ಕಾರಣ ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ ಕೆ  ವಕೀಲರಿಂದಃ</u>**

ಚಾಸಾ1 ನನಗೆ ಪರಿಚಯಸ್ಥರು. ಚಾಸಾ3 ರಿಂದ 5 ರವರು ನಮ್ಮ ಗ್ರಾಮದವರು. ಸಾಮಾನ್ಯವಾಗಿ ನಮ್ಮ ಊರಿನಲ್ಲಿ ಡೈರಿ 7.00 ಗಂಟೆಗೆ ತೆರೆಯುತ್ತಾರೆಂದರೆ ಸಾಕ್ಷಿಯು ಬೆಳಗ್ಗೆ 5.15 ಗಂಟೆಗೆ ತೆರೆಯುತ್ತಾರೆಂದು ನುಡಿಯುತ್ತಾರೆ. ಘಟನಾ ದಿನ ನಾನು ಡೈರಿ ಬಳಿ ಇರಲಿಲ್ಲ ಎಂದರೆ ಸುಳ್ಳು. ನನ್ನ ಜೊತೆಗೆ ಚಾಸಾ3 ರಿಂದ 5 ರವರು ಇರಲಿಲ್ಲ ಎಂದರೆ ಸುಳ್ಳು. ನಾನು ಅಪಘಾತ ನಂತರವೂ ಸಹ ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸುಳ್ಳು. ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ ಎಂದರೆ ಸುಳ್ಳು.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**